







ಪಾತ್ರವಹಿಸುವುದು 'ಜಾಕೋಬ್ಸ್' (Jacobson) ಅಂಗ. ಅದು ಹಾವುಗಳ ಮೂಗಿನ ಎರಡು ಹೊಳ್ಳೆಗಳ ನಡುವೆ ಇರುತ್ತದೆ. ಈ ಹಾವುಗಳು ತಮಗೆ ಆಹಾರವಾದ ಜೀವಿಗಳನ್ನು ಕೊಂದು ತಿನ್ನದೆ ಜೀವವಿದ್ದಂತೆ ಇಡಿಯಾಗಿ ನುಂಗಿ ತದನಂತರ ಜೀರ್ಣಿಸಿಕೊಳ್ಳುತ್ತದೆ. ಕೃಷಿ ಭೂಮಿಯಲ್ಲಿ ಬೆಳೆನಾಶ ಮಾಡುವ ಅನೇಕ ಬಗೆಯ ಕೀಟಗಳನ್ನು ಹಾಗೂ ದಂಶಕಗಳನ್ನು (ಇಲಿ, ಹೆಗ್ಗಣ) ತಿನ್ನುವುದರಿಂದ ಈ ಹಾವನ್ನು 'ರೈತನ ಮಿತ್ರ' ಎಂದು ಕರೆಯುತ್ತಾರೆ. ತನ್ನ ಜೀವಿತಾವಧಿಯಲ್ಲಿ ಸುಮಾರು 15,000ಕ್ಕೂ ಹೆಚ್ಚು ಇಲಿಗಳನ್ನು ಒಂದು ಕೇರೆಹಾವು ಸಾಯಿಸುತ್ತವೆ.

ಇವುಗಳು ತಮ್ಮ ಬೆಳವಣಿಗೆಗಾಗಿ ಹಾಗೂ ಚರ್ಮಕ್ಕೆ ಅಂಟಿದ ಇತರ ಪರಾವಲಂಬಿಗಳಿಂದ ದೇಹವನ್ನು ರಕ್ಷಿಸಿಕೊಳ್ಳಲು ಚರ್ಮವನ್ನು ಕಾಲಕಾಲಕ್ಕೆ ಕಳಚುತ್ತವೆ; ಈ ಕ್ರಿಯೆಯನ್ನು ಎಕ್ಡೈಸಿಸ್ (Ecdysis) ಎನ್ನುತ್ತಾರೆ. ಹೊಸ ಚರ್ಮದ ಬೆಳವಣಿಗೆ ಪೂರ್ಣಗೊಂಡ ನಂತರ ಹಳೆಯ ಚರ್ಮವು ಕಳಚಿ ಬೀಳುತ್ತದೆ. ಈ ಕ್ರಿಯೆಯು ಪ್ರೌಢಾವಸ್ಥೆಯಲ್ಲಿರುವ ಹಾವಿನಲ್ಲಿ ವರ್ಷಕ್ಕೆ ಎರಡು ಮೂರು ಬಾರಿ ಹಾಗೂ ಎಳೆಯ ಹಾವಿನಲ್ಲಿ ಪ್ರತಿ ಮೂರು ವಾರಗಳಿಗೊಮ್ಮೆ ನಡೆಯುತ್ತದೆ.

ಕೇರೆ ಹಾವುಗಳು ಸಾಮಾನ್ಯವಾಗಿ ವಸಂತ ಋತುವಿನ ಕೊನೆಯಿಂದ ಬೇಸಿಗೆಯ ಆರಂಭದ ಕಾಲದಲ್ಲಿ ತಮ್ಮ ಸಂತಾನೋತ್ಪತ್ತಿ ಕ್ರಿಯೆಯಲ್ಲಿ ತೊಡಗಿಕೊಳ್ಳುತ್ತವೆ. ನಂತರ ಮಾರ್ಚ್‌ನಿಂದ ಸೆಪ್ಟೆಂಬರ್ ತಿಂಗಳ ಅವಧಿಯಲ್ಲಿ ಹೆಣ್ಣು ಹಾವು ಪ್ರತಿ ಕ್ಲಂಚ್‌ಗೆ 8ರಿಂದ 20 ಮೊಟ್ಟೆಗಳನ್ನಿಟ್ಟು, 60ರಿಂದ 80 ದಿನಗಳವರೆಗೆ ಕಾವು ಕೊಟ್ಟು ಕಾಪಾಡುತ್ತದೆ. ಸಂತಾನೋತ್ಪತ್ತಿ ಕಾಲ ಸಮೀಪಿಸಿದಾಗ ಗಂಡು ಕೇರೆ ಹಾವುಗಳು ತಮ್ಮ ವ್ಯಾಪ್ತಿಗಾಗಿ ಹೋರಾಟ ಮಾಡುತ್ತವೆ. ಇದನ್ನು Combat dance ಅಥವಾ Territory fight ಎಂದು ಕರೆಯುತ್ತಾರೆ.

ತಮ್ಮ ವ್ಯಾಪ್ತಿಯ ವಲಯದ ನಿರ್ಧಾರಕ್ಕಾಗಿ ಕೇರೆ ಹಾವುಗಳು ಸೆಣಸುವುದರ ಬಗ್ಗೆ ಕೇಳಿದ್ದೆ; ಆದರೆ ಎಂದೂ ನೋಡಿರಲಿಲ್ಲ. ಆದ್ದರಿಂದ ನನಗೆ ಇದೊಂದು ಅದ್ಭುತ ದೃಶ್ಯವಾಗಿತ್ತು. ಸೆಣೆಸುವ ಪ್ರಕ್ರಿಯೆಯಲ್ಲಿ ಎರಡು ಗಂಡು ಕೇರೆ ಹಾವುಗಳು, ಹೆಣ್ಣು ಕೇರೆ ಹಾವು ತನ್ನ ದೇಹದಿಂದ ಹೊರಸೂಸುವ ಫೆರಮೋನನ್ನು (ಒಂದು ರಾಸಾಯನಿಕ ದ್ರವ್ಯ) ಹಿಂಬಾಲಿಸಿ ಬರುತ್ತವೆ. ಎರಡೂ ಗಂಡು ಹಾವುಗಳು ಹೆಣ್ಣನ್ನು ಒಲಿಸಿಕೊಳ್ಳಲು ಹೋರಾಟ ನಡೆಸುವಾಗ ತಮ್ಮ ದೇಹವನ್ನು ಒಂದಕ್ಕೊಂದು ಉಜ್ಜಿಕೊಳ್ಳುತ್ತ ಏಣಿಯಂತೆ ಸುತ್ತಿಕೊಳ್ಳುತ್ತವೆ. ಕೆಲವೊಮ್ಮೆ ತಮ್ಮ ಶಕ್ತಿಯನ್ನು ಪ್ರದರ್ಶಿಸುವ ಸಲುವಾಗಿ ಲಂಬವಾಗಿ ನಿಂತು ಇನ್ನೊಂದನ್ನು ಕೆಳಕ್ಕೆ ಬೀಳಿಸಲು ಪ್ರಯತ್ನಿಸುತ್ತದೆ. ಒಂದು ಹಾವು ಇನ್ನೊಂದನ್ನು ಕೆಳಕ್ಕೆ ಬೀಳಿಸುವವರೆಗೆ ಅದು ನೆಲದಿಂದ ಮೂರು ನಾಲ್ಕು ಅಡಿಗಳಷ್ಟು ಎತ್ತರಕ್ಕೆ ನಿಂತಿರುತ್ತದೆ.

ಹೋರಾಟದಲ್ಲಿ ಗೆದ್ದ ಹಾವು ಹೆಣ್ಣನ್ನು ಒಲಿಸಿಕೊಳ್ಳುತ್ತದೆ. ಸೋತ ಹಾವು ತನ್ನ ದಾರಿ ಹಿಡಿದು ಹಿಂತಿರುಗುತ್ತದೆ. ಈ ದೃಶ್ಯವನ್ನು ನಾನು ಸುಮಾರು ಒಂದು ಗಂಟೆಯ ಕಾಲ ವೀಕ್ಷಿಸಿ ಅನೇಕ ಚಿತ್ರಗಳನ್ನು ಸೆರೆಹಿಡಿದೆ.

ಕೇರೆಗಳ ಸೆಣಸನ್ನು ಹಳ್ಳಿಗಳಲ್ಲಿ 'ಹಾವು ಎಣೆ ಆಡುವುದು' ಎಂದು ಕರೆಯುತ್ತಾರೆ. ಅನೇಕ ಜನರು ಇದನ್ನು ನಾಗರಹಾವು ಹಾಗೂ ಕೇರೆ ಹಾವಿನ ಸಂಭೋಗ ನೃತ್ಯ ಎಂಬ ತಪ್ಪು ಕಲ್ಪನೆಯನ್ನು ಹೊಂದಿದ್ದಾರೆ. ಇದನ್ನು ವೀಕ್ಷಿಸಿದರೆ ದೋಷ ಬರುತ್ತದೆಂಬ ಮೂಢನಂಬಿಕೆ ಇದೆ. ಆದರೆ ಇದೊಂದು ಪ್ರಕೃತಿಯಲ್ಲಿ ನಡೆಯುವ ಅಪರೂಪದ ದೃಶ್ಯ. ಹಾವುಗಳಿಗೆ ಯಾವುದೇ ರೀತಿಯ ತೊಂದರೆ ಕೊಡದೆ ಈ ಅದ್ಭುತವನ್ನು ವೀಕ್ಷಿಸಿದರೆ ತಪ್ಪೇನಿಲ್ಲ.